ಮಂಗಳೂರು ವಿಶ್ವವಿದ್ಯಾನಿಲಯದವರು ಅದನ್ನು ಅಫಿಲಿಯೇಷನ್ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಆ ಬಗ್ಗೆ ಸರ್ಕಾರ ತನ್ನ ಅಧಿಕಾರವನ್ನು ಚಲಾಯಿಸಿ ಅದರಲ್ಲಿ ಸ್ವಲ್ಪ ದೋಷಗಳು ಇದ್ದರೂ ಸಹ ಅದನ್ನು ಸರಿಮಾಡಿಸಿ ಅವರಿಗೆ ಅಫಿಲಿಯೇಷನ್ ಕಂಟಿನ್ಯೂ ಆಗುವ ಹಾಗೆ ಮಾಡತ್ತೇವೆ. ಈಗ ಅದು ಸರಿಯಾಗಿ ನಡೆದುಕೊಂಡು ಹೋಗುತ್ತಾ ಇದೆ. ಇನ್ನು ಮಾನ್ಯ ಸದಸ್ಯರಿಯವರು ಆನೇಕ ಕಡೆ ವೈದ್ಯರು ಇಲ್ಲ ಮಹಿಳಾ ವೈದ್ಯರಿಲ್ಲ ಈ ಅಧಿವೇಶನ ಮುಗಿಯುವಷ್ಟರಲ್ಲಿ ಭರ್ತಿ ಮಾಡಬೇಕು ಎಂದು ಹೇಳಿದ್ದಾರೆ. ಈ ಅಧಿವೇಶನ ಮುಗಿಯುವಷ್ಟರಲ್ಲಿ ಅಷ್ಟು ಬೇಗ ಪೋಸ್ಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ವೈದ್ಯರನ್ನು ಭರ್ತಿ ಮಾಡುವುದಕ್ಕೆ ಸಾಧ್ಯವಾದಷ್ಟು ಬೇಗನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಅಷ್ಟು ಮಾತ್ರ ಹೇಳುತ್ತೇನೆ.

VI ಬೆಳ್ತಂಗಡಿ ತಾಲ್ಲೂಕಿನಲ್ಲಿ ಗ್ರಾಮ ಕರಣೀಕರ್‌ರ ವರ್ತನೆ. —

ಶ್ರೀ ಕೆ. ವಸಂತ ಬಂಗೇರ — ಮಾನ್ಯ ಅಧ್ಯಕ್ಷರೇ, ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಗ್ರಾಮಕರಣಿಕರಲ್ಲಿ ಕೆಲವರು ಗ್ರಾಮದ ದೊರೆಗಳಂತೆ ವರ್ತಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಗ್ರಾಮಸ್ಥರಿಗೆ ಯಾವುದೇ ವಿಚಾರಕ್ಕೂ ಗ್ರಾಮಕರಣಿಕರು ಮುಖ್ಯ. ಆದರೆ ಜಿಲ್ಲಾಧಿಕಾರಿಗಳಲ್ಲಾದರೂ ನೇರವಾಗಿ ಮಾತನಾಡಬಹುದು. ಇವರಲ್ಲಿ ಕೆಲವರಲ್ಲಿ ಮಾತನಾಡುವುದಕ್ಕೂ ಸ್ಟ್ಯಾಂಪ್ ಹಾಕಿ ಅರ್ಜಿ ಕೊಡಬೇಕಾಗುತ್ತದೆ. ಯಾವುದೇ ಕೆಲಸಕ್ಕೂ ಕೂಡ ಕನಿಷ್ಠ ೧೦೦ರೂಪಾಯಿಗಳು ಲಂಚವಿಲ್ಲದೇ ಆಗುವುದಿಲ್ಲ. ಸರ್ಕಾರದ ಉಚಿತ ಕಾನೂನು ನೆರವು ಕೊಡುವ ಯೋಜನೆ ಜಾರಿಗೆ ಬಂದಿದೆ. ಆದರೆ ಅದಕ್ಕೆ ಬೇಕಾದ ಆದಾಯ ಸರ್ಟಿಫಿಕೇಟ್‌ಗೆ ಗ್ರಾಮಕರಿಣಿಕರ ಫೀಜು ಅತಿಯಾಗಿದ್ದು ಆಲ್ಲದೆ ಅಲೆದಾಟ ಜಾಸ್ತಿಯಾಗುವುದರಿಂದ ಬಡವರು ಈ ಕಾನೂನಿನ ಪ್ರಯೋಜನದಿಂದ ವಂಚಿತರಾಗುತ್ತಾರೆ. ಯಾವುದೇ ಸಣ್ಣ ಪುಟ್ಟ ಕೆಲಸಗಳಿಗೂ ಹಣವಿಲ್ಲದೆ ಆಗುವುದಿಲ್ಲ. ಗ್ರಾಮಕರಿಣಿಕರು ಪುಜೋದನೆ ಕೊಟ್ಟು ಸರ್ಕಾರೀ ಜಮೀನನ್ನು ಅಕ್ರಮವಾಗಿ ಕೊಡಿಸಿದ್ದಾರೆ. ಸರ್ಕಾರೀ ಕಾಡುಗಳನ್ನು ದರೋಡೆ ಮಾಡಿ ಸ್ವಾಧೀನದಲ್ಲಿಟ್ಟುಕೊಂಡು ಕೃಷಿ ಮಾಡುತ್ತಿದ್ದಾರೆ. ಪಂಚಾಯತಿ ಆದಾಯದ ಶೇಕಡ ೧೮ನ್ನು ಹರಿಜನಗಿರಿಜನರಿಗೆ ಹಂಚಬೇಕಾದ್ದು ಇದೆ. ಇದನ್ನೂ ಕೂಡ ಹರಿಜನ ಗಿರಿಜನರಿಗೆ ಹಂಚದೆ ಪೋರ್ಜರಿಮಾಡಿ ಹೆಬ್ಬೆಟ್ಟು ಹಾಕಿಸಿ ಮಾಡಿದ್ದಾರೆ. ಕೆಲವು ಗ್ರಾಮ ಕರಿಣಿಕರ ತಾಯಿಯ ಹೆಸರಿನಲ್ಲಿ ತಂದೆಯ ಹೆಸರಿನಲ್ಲಿ ಹೆಂಡತಿಯ ಹೆಸರಿನಲ್ಲಿ ಅಂತೆಯೇ ಇನ್ನುಳಿದ ಸಂಬಂಧಿಕರ ಹೆಸರಿನಲ್ಲಿ ತಾಲ್ಲೂಕಿನಲ್ಲಿ ಸುಮಾರು ೧೦೦ ಕ್ಕೂ ಮಿಕ್ಕಿದ ದರ್ಖಾಸ್ತನ್ನು ತಮಗೇ ಮಾಡಿಸಿಕೊಂಡಿದ್ದಾರೆ. ಅಲ್ಲದೆ ತಾಲ್ಲೂಕಿನಲ್ಲಿರುವ ಅನೇಕ ಹರಿಜನ ಗಿರಿಜನ ದರ್ಖಾಸ್ತು ಭೂಮಿಯನ್ನು ತಡಿ ಮುಕ್ಕ್ಯಾಯಕ್ಕೆ ಖರೀದಿಸಿದ್ದಾರೆ. ಗ್ರಾಮಕರಿಣಿಕರ ಆದಾಯದಷ್ಟು ಅವರು ಕೂಡು ಹಾಕಿದ ಸಂಪತ್ತೆಷ್ಟು ಇವೆಲ್ಲ ಎಲ್ಲಿಂದ ಬಂತು ಎಂಬುದಾಗಿ ತನಿಖೆ ನಡೆಸಂವಿರಾ ?

ಈಗಾಗಲೇ ಕೆಲವರ ಮೇಲೆ ಕೆಲವು ಆರೋಪಗಳಿದ್ದು ಸರ್ಕಾರಕ್ಕೆ ಹಾಗೂ ಮಾನ್ಯ ಸಹಕಾರಿಲ್ಲದವರಿಗೆ ಅದು ಬಂದಿದ್ದು ತನಿಖೆ ನಡೆದು ದೂರುಗಳು ಸರಿಯೆಂದು ತಿಳಿದು ಬಂದಿದ್ದರೂ ಅವರ ಮೇಲೆ ಏಕೆ ಸೂಕ್ತ ಕ್ರಮ ಕೈಗೊಂಡಿಲ್ಲ ? ಈ ಬಗ್ಗೆ ತಕ್ಷಣ ತಾವು ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮಕೈಗೊಳ್ಳುವಿರಾ ? ಅವರು ಗ್ರಾಮದ ದೊರೆಗಳಲ್ಲ ಜನರ ಸೇವಕರು ಎಂದು ತಿಳಿಯುವಂತೆ ವ್ಯವಸ್ಥೆ ಮಾಡಬೇಕಾಗಿ ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಅವಕಾಶವನ್ನು ಚೆನ್ನಾಗಿ ಉಪಯೋಗಿಸಿಕೊಂಡಿದ್ದಾರೆ.

ಶ್ರೀ ಬಿ ಎಸ್. ಯಡಿಯೂರಪ್ಪ —ನಾವು ಏನೇನು ಹೇಳಬೇಕೆಂದು ಇರುತ್ತವಯೋ ಅದನ್ನೆಲ್ಲಾ ಒಂದೇಸಾರಿ ಹೇಳತಕ್ಕ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬಹಳ ಬುದ್ಧಿವಂತಿಕೆಯಿಂದ ಬರೆದಿದ್ದಾರೆ. ಆಪಾದನೆ ಬಂದಂಥ ಗ್ರಾಮಕರಣಿಕರ ಮೇಲೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಬೆಳ್ತಂಗಡಿ ತಾಲ್ಲೂಕಿನ ಕೆಲವರು ಎಂದು ಹೇಳಿದ್ದಾರೆ. ನಿರ್ದಿಷ್ಟವಾಗಿ ಇಂಥವರು ಎಂದು ಬರೆದುಕೊಟ್ಟರೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ. ಸದನದಲ್ಲಿಯೇ ಅದನ್ನು ಕೊಡಬೇಕೆಂದೇನೂ ಇಲ್ಲ. ಅವರು ಈ ಮೊದಲು

ವಿಷಯವನ್ನು ಈ ಘಟನೆಯಲ್ಲಿ ಎಸ್ಡಿದಾಗ ತಹಶೀಲ್ದಾರ್‌ರವರು ರೆಕಾರ್ಡ್ ಚೇಂಜ್ ಮಾಡಿದ್ದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇನೆ. ನೇರವಾಗಿ ಅವರು ಯಾವ ಊರಿನವರು, ಅವರ ಹೆಸರು ಹೇಳಲಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರಿ. ಎ. ಲಕ್ಷ್ಮೀಸಾಗರ್.—ಉಚಿತ ಕಾನೂನು ನೆರವು ಪಡೆಯಲಿಕ್ಕೆ ಗ್ರಾಮ ಲೆಕ್ಕಿಗರಿಂದ ಸರ್ಟಿಫಿಕೇಟ್ ಬೇಕೆಂದು ಮಾನ್ಯ ಸದಸ್ಯರು ಹೇಳಿದರು ಆ ರೀತಿ ಸರ್ಟಿಫಿಕೇಟ್ ಬೇಕಾಗಿಲ್ಲ. ಮಾನ್ಯ ಸದಸ್ಯರು ಇದನ್ನು ತಿಳಿದುಕೊಳ್ಳುವುದು ಒಳ್ಳೆಯದು.

ಶ್ರೀ ಕೆ. ವಸಂತ ಬಂಗೇರಾ.—ಆದಾಯದ ಸರ್ಟಿಫಿಕೇಟನ್ನು ಯಾರು ಕೊಡುತ್ತಾರೆ?

ಶ್ರೀ ಆರ್. ಎನ್. ನಾಯಕ್.—ಆದಾಯ ಸರ್ಟಿಫಿಕೇಟ್ ಹೇಗೆ ಪಡೆಯಬೇಕು?

ಶ್ರೀ ಎ. ಲಕ್ಷ್ಮೀಸಾಗರ್.—ಕಾನೂನು ಸಮಿತಿ ಅಧ್ಯಕ್ಷರ ಮುಂದೆ ಅಫಿಡವಿಟ್ ಹಾಕಿದರೆ ಸಾಕು. ಅರ್ಜಿಗೆ ಸ್ಟಾಂಪ್ ಕೂಡ ಹಾಕಬೇಕಾಗಿಲ್ಲ, ಕಾಲಿ ಕಾಗದದಲ್ಲಿ ಅರ್ಜಿ ಹಾಕಿದರೆ ಸಾಕು.

vii. ಗೌರಿಬಿದನೂರು ತಾಲ್ಲೂಕಿನ ಭೂಹೀನ ಕೃಷಿ ಕಾರ್ಮಿಕರಮೇಲೆ ಅಶ್ರು ವಾಯು ಪ್ರಯೋಗ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯ ಗೌರೀಬಿದನೂರು ತಾಲ್ಲೂಕಿನ ನಾಗಸಂದು ಹಾಲಗಾನಹಳ್ಳಿ, ಚುದನೂರು, ಕದಿರೇನಹಳ್ಳಿಯ ಭೂಹೀನ ಕೃಷಿ ಕಾರ್ಮಿಕರ ಮೇಲೆ ೧೪-೮-೧೯೫೮ ರಾತ್ರಿ ಅಶ್ರುವಾಯು ಪ್ರಯೋಗ ಹಾಗೂ ಲಾಠಿ ಪ್ರಹಾರ ನಡೆದಿದೆ. ಈ ಲಾಠಿ ಪ್ರಹಾರದಿಂದ ನೂರಾರು ಜನರಿಗೆ ಹಾಗೂ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರಿಗೆ ತೀವ್ರವಾಗಿ ಪೆಟ್ಟಾಗಿರುವುದಲ್ಲದೆ ಇಬ್ಬರನ್ನೂ ಆಸ್ಪತ್ರೆಗೆ ಸೇರಿಸಬೇಕಾಗಿ ಬಂದಿದೆ. ಅಲ್ಲದೆ ೬೦೦ ಜನರನ್ನು ಬಂಧಿಸಿದ್ದಾರೆ. ಭೂಹೀನರ ಮೇಲೆ ನಡೆದ ಈ ದೌರ್ಜನ್ಯ ಖಂಡನೀಯ ಭೂಹೀನ ಕೃಷಿ ಕಾರ್ಮಿಕರು ಸರ್ಕಾರಿ ಜಮೀನನ್ನು ಒಕ್ಕಲಿಸಿ ತಮ್ಮ ಜೀವನವನ್ನು ಉತ್ತಮಗೊಳಿಸಲು ಪ್ರಯತ್ನಿಸುತ್ತಿರುವುದರಿಂದ ಈ ಧಾಳಿ ನಡೆದಿದೆ. ಈಚಲು ಮರದವ್ವನ ಭಕ್ತರಾದ ಈ ಭೂಹೀನರು ತಮ್ಮ ಜೀವನವನ್ನು ನಾಶ ಮಾಡುತ್ತಿರುವ ಈಚಲು ಮರಗಳ ವನಗಳನ್ನು ಕಡಿದು ಅದನ್ನು ಜೀವನಧಾರವಾದ ಕೃಷಿ ಭೂಮಿಯನ್ನಾಗಿ ಪರಿವರ್ತಿಸುವ ಪ್ರಯತ್ನ ಮಾಡಿದ್ದಾರೆ, 'ಹೆಂಡ ಬೇಡ ಭೂಮಿ ಬೇಕು' ಎಂಬ ಘೋಷಣೆ ಸ್ವಾಗತಾರ್ಹ. ನಾಗಸಂದ್ರದ ೧೨೦ ಕುಟುಂಬಗಳನ್ನು ಒಂದು ವರ್ಷದ ಹಿಂದೆಯೇ ಗುರುತಿಸಲಾಗಿದ್ದು ಈ ಕಾರಣಕ್ಕಾಗಿ ಮಾನ್ಯ ನಜೀರ್ ಸಾಬ್‌ರವರ ಮೇಲೆ ಅಲ್ಲಿನ ಭೂ ಮಾಲೀಕರು ಧಾಳಿ ಮಾಡಿದ್ದಾರೆ. ಆದರೆ ಈ ಜೀತಗಾರರ ಪುನರ್ವಸತಿ ಸೌಲಭ್ಯಗಳಾವುವು ದೊರೆತಿಲ್ಲ. ಈ ಜನ ಭೂಮಿಯನ್ನು ಒಕ್ಕಲಿಸಲು ಪ್ರಯತ್ನಿಸಿದ್ದಾಗ ಈ ಲಾಠಿ ಚಾರ್ಜು ನಡೆದಿದ್ದು ಮುಖ್ಯಮಂತ್ರಿಗಳ ಮುಂದೆ ಅವರು ಭೂಮಿಗಾಗಿ ದಲಿತ ಸಂಘರ್ಷ ಸಮಿತಿ ಮೂಲಕ ಮನವಿಯನ್ನು ಸಲ್ಲಿಸಿದರೂ ಏನೂ ಪ್ರಯೋಜನವಾಗಲಿಲ್ಲ.

ನಮ್ಮ ರಾಜ್ಯದಲ್ಲಿ ಭೂ-ಸುಧಾರಣೆಯಿಂದ ಭೂಹೀನರಿಗೆ ಅಲ್ಪಸ್ವಲ್ಪ ಭೂಮಿಯವರಿಗೆ ಹೆಚ್ಚಿನ ಪ್ರಯೋಜನವಾಗಲೇ ಇಲ್ಲ, ಎಂಬುದನ್ನು ಸರ್ಕಾರದ ವರದಿಗಳೇ ಸಾರುತ್ತಿವೆ. ಕೇಂದ್ರಸರ್ಕಾರದ ಕೃಷಿ ಗಣತಿಯ ಅಂಕಿಅಂಶಗಳು ಕೂಡ ಇದನ್ನೇ ಸಾರುತ್ತಿವೆ.

ಹೀಗೆ ಭೂ-ಸುಧಾರಣೆಯಿಂದ ಪ್ರಯೋಜನವಾದ ಭೂಮಿಯನ್ನು ನೀಡುವುದರ ಬದಲಾಗಿ, ಜೀತದಿಂದ ವಿಮುಕ್ತಿ ಹೊಂದಿ ಜೀವನಾಧಾರವಿಲ್ಲದೆ ಬಳಲುತ್ತಿರುವವರು ಅನಿವಾರ್ಯವಾಗಿ ಸರ್ಕಾರಿ ಭೂಮಿಯನ್ನು ಅಕ್ರಮಣಮಾಡಿದ್ದಾರೆ. ಅಂಥವರಿಗೆ ಅವರ ಭೂಮಿಯನ್ನು ಸಕ್ರಮ ಮಾಡಬೇಕು. ಈ ಪರಿಸ್ಥಿತಿಯನ್ನು ಸರ್ಕಾರ ಗಮನಿಸಿ ಈಚಲು ವನವನ್ನು ಆಕ್ರಮಿಸಿದ ಈ ಜೀತಗಾರರಿಗೆ ಕೂಡಲೇ ಪುನರ್ವಸತಿ ಕಾರ್ಯವನ್ನು ಕೈಗೊಳ್ಳಬೇಕು. ಅವರ ಮೇಲೆ ಹಾಕಿರುವ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು. ಮತ್ತು ಈ ಅಮಾನುಷ ದೌರ್ಜನ್ಯ ನಡೆಸಿದ ಪೋಲೀಸ್ ಇನ್ಸ್‌ಪೆಕ್ಟರ್‌ರವರನ್ನು ಸಸ್ಪೆಂಡ್ ಮಾಡಬೇಕು ಎಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.